


## ರಿಯಲೀ ರಿಯಲ್!

'ಸುಧಾ' ಜೂನ್ 20ರ ಸಂಚಿಕೆಯ 'ರಿಯಾಲಿಟಿ ಶೋ ಎಷ್ಟು ರಿಯಲ್?' ಗುಡಿಹಳ್ಳಿ ನಾಗರಾಜರ ಮುಖಪುಟ ಲೇಖನ ರಿಯಲ್ ಆಗಿ ಮೂಡಿಬಂದಿದೆ, ಚಿಂತನಾರ್ಹವಾಗಿದೆ.

–ಸು.ವಿಜಯಲಕ್ಷ್ಮಿ, ಪಿ.ಗೋವಿಂದರಾಜ್, ಶಿವಮೊಗ್ಗ/ ಮೀರಾ ಮೋಹನ್, ಛಾಯಾ ಸುಂದರ್ ಬೆಂಗಳೂರು/ ಆರತಿ ರಾಜೇಂದ್ರ ಹೆಗಡೆ, ಹಾವೇರಿ/ ಮೇ.ಗೋ.ಸುಬ್ಬಣ್ಣ, ಮೇಗರವಳ್ಳಿ/ ಎಸ್.ಲಕ್ಷ್ಮೀನರಸಿಂಹ, ಚಾಮರಾಜನಗರ/ ಡಾ.ಕೆ.ಕೆ.ಜಯಚಂದ್ರಗುಪ್ತ, ಹಾಸನ/ ಎಚ್.ಆನಂದಕುಮಾರ್, ಚಿತ್ರದುರ್ಗ

## ವಾಸ್ತವದ ವಿಶ್ಲೇಷಣೆ

'ರಿಯಾಲಿಟಿ ಶೋ ಎಷ್ಟು ರಿಯಲ್' ವಾಸ್ತವ ಚಿತ್ರಣ ಕಟ್ಟಿಕೊಟ್ಟ ವಿಶ್ಲೇಷಣೆಯಾಗಿದೆ. ಕನ್ನಡ ಭಾಷೆಯ ಕುರಿತ ಕಳಕಳಿ ಅನನ್ಯವಾಗಿದೆ.

–ಚಿತ್ರನಟಿ ಅಪರ್ಣ, ಬೆಂಗಳೂರು

## ಗಮನ ಸೆಳೆದ ಚಿತ್ರಲೇಖನ

'ಕುರಿಗಳು ಸಾರ್' ಆರ್.ಎಸ್.ಪಾಟೀಲರ ಚಿತ್ರಲೇಖನ ಗಮನ ಸೆಳೆಯಿತು.

–ಬಿ.ಎನ್.ಸೊಲ್ಲಾಪುರೆ ಕಮಲ ನಗರ, ಔರಾದ್

## ನಟಿಯರ ಸಾವಿಗೆ ಕಾರಣ ಏನು?

'ನಟಿಯರೇಕೆ ಹೀಗೆ ಸಾಯುತ್ತಾರೆ?' ಎಂ.ಎಸ್.ಅಮಿತ್ ಬರಹ ಓದಿ ಮನಕಲಕಿತು.

–ಟಿ.ಎನ್.ಸರಸ್ವತಿ, ತುರುವೇಕೆರೆ/ ವೈ.ಜಿ.ನರಸಿಂಹನ್, ಶಿವಮೊಗ್ಗ/ ಕಸ್ತೂರಿ, ತುಮಕೂರು/ ನಿತ್ಯ ಎಸ್., ಮೂಡಬಿದಿರೆ

## ಸಮಕಾಲೀನ ಕಥೆ

'ಭಾವ ಭಿತ್ತಿಯ ಚಿತ್ರ' ಟಿ.ಕೆ.ತ್ಯಾಗರಾಜ್‌ರ ಕಥೆ ಅಣ್ಣತಂಗಿಯರ ಆಸ್ತಿ ಹಂಚಿಕೆ ವಿವಾದದಿಂದ ಭೂಕಬಳಿಕೆವರೆಗೆ ವ್ಯಾಪಿಸಿ, ಸಮಕಾಲೀನ ಕಥೆಯಾಗಿದೆ.

–ಸಿ.ಎನ್.ರಮೇಶ್, ಸಿ.ಎನ್.ಉಮಾ, ಬೆಂಗಳೂರು

## 'ಸುಧಾ' ಓದಲು ಆರಂಭಿಸಿದೆ

ಕಳೆದ ವಾರದಿಂದ 'ಸುಧಾ' ಓದಲು ಆರಂಭಿಸಿದೆ. 'ನೀವು ಕೇಳಿದಿರಿ', 'ಈ ವಾರ ನಮ್ಮೊಂದಿಗೆ', 'ವಿಚಾರ ಲಹರಿ' ಮುಂತಾದ ಅಂಕಣಗಳು ಇಷ್ಟವಾಗುತ್ತವೆ. ಕಥೆ, ಕಥೆಗಿಂತ ಧಾರಾವಾಹಿಯೂ ಬಹಳ ಇಷ್ಟ. ಇನ್ನು ಮುಂದೆ ಕಾಯಂ ಓದುಗ ಆಗುವೆ.

–ಎಸ್.ಎಚ್.ಷಣ್ಮುಖ ಹಳೇಬಾತಿ, ದಾವಣಗೆರೆ

## ಬೆಟ್ಟದೂರು ಪ್ರಶಸ್ತಿಗೆ ಆಹ್ವಾನ

ಅಮರಮ್ಮ ಚೆನ್ನಬಸವಪ್ಪ ಬೆಟ್ಟದೂರು ಪ್ರತಿಷ್ಠಾನವು 2012 ಜನವರಿಯಿಂದ 2012 ಡಿಸೆಂಬರ್‌ವರೆಗಿನ ಅವಧಿಯಲ್ಲಿ ಪ್ರಕಟವಾಗಿರುವ ವಚನ ಸಾಹಿತ್ಯ ಹಾಗೂ ವೈಚಾರಿಕ ಕೃತಿಗಳನ್ನು ಪ್ರಶಸ್ತಿಗೆ ಆಹ್ವಾನಿಸಿದೆ.

ಲೇಖಕರು ಮೂರು ಪ್ರತಿಗಳನ್ನು ಅಲ್ಲಮಪ್ರಭು ಬೆಟ್ಟದೂರು, ಅಮರಚೇತನ ಕಲ್ಯಾಣ ನಗರ, ಕಿನ್ನಾಳ ರಸ್ತೆ, ಕೊಪ್ಪಳ–583231 ಇವರಿಗೆ ಜುಲೈ 31 ರೊಳಗೆ ಕಳುಹಿಸಲು ವಿನಂತಿಸಲಾಗಿದೆ. ಸಂಪರ್ಕಕ್ಕೆ: 9844049205.

## ರಂಗ ಅಧ್ಯಯನ: ಅರ್ಜಿ ಆಹ್ವಾನ

ಕನ್ನಡ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿರುವ ಕುಂದಾಪುರ ರಂಗ ಅಧ್ಯಯನ ಕೇಂದ್ರವು ನಡೆಸುವ 2013–14ರ ಸಾಲಿನ ಒಂದು ವರ್ಷದ ನಾಟಕ ಡಿಪ್ಲೊಮಾ ತರಗತಿಗೆ ಅರ್ಜಿಗಳನ್ನು ಆಹ್ವಾನಿಸಿದೆ. ಕನಿಷ್ಠ ಅರ್ಹತೆ ಎಸ್.ಎಸ್.ಎಲ್.ಸಿ. ರಂಗಭೂಮಿಯಲ್ಲಿ ವಿಶೇಷ ಹಿನ್ನಲೆ ಹೊಂದಿರುವವರಿಗೆ ಆದ್ಯತೆ. ಆಸಕ್ತರು ನಿರ್ದೇಶಕರು, ರಂಗ ಅಧ್ಯಯನ ಕೇಂದ್ರ, ಭಂಡಾರ್ಕಾರ್ಸ್ ಕಾಲೇಜು ವಠಾರ, ಕುಂದಾಪುರ–576 201, ಉಡುಪಿ ಜಿಲ್ಲೆ ಈ ವಿಳಾಸಕ್ಕೆ 100 ರೂ. ಡಿ.ಡಿ. ಸಲ್ಲಿಸಿ ಅರ್ಜಿ ಪಡೆಯಬಹುದು. ನಿರ್ದೇಶಕರು, ರಂಗ ಅಧ್ಯಯನ ಕೇಂದ್ರದ ಹೆಸರಿನಲ್ಲಿ ಡಿಡಿ ಇರಬೇಕು. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಜುಲೈ 03. ಹೆಚ್ಚಿನ ವಿವರಗಳಿಗೆ: 9449105052 ಸಂಪರ್ಕಿಸಬಹುದು.

